ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 12.03.2024.
**ಮುಖ್ಯ ವಿಚಾರಣೆ:** ವಾದಿ ಪರ ಶ್ರೀ ಎಸ್.ಬಿ.ಪಿ. ವಕೀಲರಿಂದ:

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ಇಂದು ನಾನು ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ನನ್ನ ತಂದೆ ನನಗೆ ಬರೆದುಕೊಟ್ಟ ವಿಶೇಷ ಮುಕ್ತಿಯಾರ ಪತ್ರವನ್ನು ನಿಪಿ-1 ಎಂದು, ಮೂಲ ನೋಂದಣಿ ಕ್ರಯ ಕರಾರು ಪತ್ರವನ್ನು ನಿಪಿ-2 ಎಂದು, ನಿಪಿ-2 ರಲ್ಲಿ ಪ್ರತಿವಾದಿಯ ಐದು ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-2(ಎ) ರಿಂದ ನಿಪಿ-2(ಇ) ಎಂದು, ನಿಪಿ-2 ರಲ್ಲಿ ನನ್ನ ತಂದೆ ನಾನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಎಫ್) ಎಂದು, ನಿಪಿ-2 ಕ್ಕೆ ಗುಂಡಪ್ಪ, ಸುದಾಮ, ಪಾಂಡುರಂಗ ಮತ್ತು ಶಿವಶರಣಪ್ಪ ರವರು ಸಾಕ್ಷಿದಾರರು ಅಂತ ಸಹಿ ಮಾಡಿದ್ದು, ಅವರುಗಳ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-2(ಜಿ) ರಿಂದ ನಿಪಿ-2(ಜೆ) ಎಂದು, ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಹದಿಮೂರು ಗಣಕೀಕೃತ ಹಣಿಗಳನ್ನು ಕ್ರಮವಾಗಿ ನಿಪಿ-3 ರಿಂದ ನಿಪಿ-15 ಎಂದು, ಟೋಂಚ್ ನಕಾಶೆಯನ್ನು ನಿಪಿ-16 ಎಂದು, ಫಾರಂ ನಂ.10 ನ್ನು ನಿಪಿ-17

ಎಂದು, ಆಕಾರಬಂದ್‌ನ್ನು ನಿಪಿ-18 ಎಂದು, ನೋಟೀಸ್‌ನ ಪ್ರತಿಯನ್ನು ನಿಪಿ-19 ಎಂದು, ಅಂಚೆ ರಶೀದಿಯನ್ನು ನಿಪಿ-20 ಎಂದು, ನಮ್ಮ ವಕೀಲರು ಅಂಚೆ ಕಛೇರಿಗೆ ಕೊಟ್ಟ ಪತ್ರವನ್ನು ನಿಪಿ-21 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ನನ್ನ ದಾವೆಯಲ್ಲಿ ಕೇಳಿದಂತೆ ಡಿಕ್ರಿ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

<u>**ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರಿಂದಃ</u>

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**